	ಸೇರ್ಪಡೆಗೊಳಿಸುವ ಬಗ್ಗೆ ಸರ್ಕಾರ ಗಮನಿಸಿದೆಯೇ?	
ಆ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?	ಮುಂಬರುವ ದಿನಗಳಲ್ಲಿ ಅನುದಾನದ ಲಭ್ಯತೆಯ ಮೇರೆಗೆ ಆದ್ಯಯನ ಕಾರ್ಯವನ್ನು ಕೈಗೊಳ್ಳಲು ಕ್ರಮ ಜರುಗಿಸಲಗುವುದು
ಇ)	ಹಾಗಿದ್ದಲ್ಲಿ, ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಳಿಸಲು ಯಾವಾಗ ಕ್ರಮ ಗೈಗೊಳ್ಳಲಾಗುವುದು?	ಕುಳಶಾಸ್ತ್ರೀಯ ಅಧ್ಯಯನ ವರದಿಯ ಹಿನ್ನಲೆಯಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೬೭೯ (೧೯೬೬)

ಸದಸ್ಯರ ಹೆಸರು ಶ್ರೀ ಮೋಹನ್ ಪಿ ಸಿ (ಚಿಕ್ಕಪೇಟೆ)

ಉತ್ತರಿಸುವ ಸಚಿವರು ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು (ಹುದ್ದೆವಾರು ವಿವರ ನೀಡುವುದು) ,</td><td>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು ೧೪೭೭೦ ವಿವರ ಈ ಕೆಳಗಿನಂತಿದೆ
<table>
<tr><th rowspan="2">ಕ್ರ ಸಂ</th><th rowspan="2">ಇಲಾಖೆ</th><th colspan="4">ವರ್ಗವಾರು ಹುದ್ದೆಗಳು</th></tr>
<tr><th>ಎ</th><th>ಬಿ</th><th>ಸಿ</th><th>ಡಿ</th></tr>
<tr><td>೧</td><td>ಆರೋಗ್ಯ ಮತ್ತು</td><td>೭೯೪</td><td>೨೪೧</td><td>೭೮೬೬</td><td>೫೨೪೭</td></tr>
</table>
</td></tr>
</table>

			ಕುಟುಂಬ ಕಲ್ಯಾಣ ಸೇವೆಗಳು				
		೨	ಆಯುಷ್ ಇಲಾಖೆ	೨೬	೨೫	೧೩೮	೩೦೫
		೩	ಔಷಧ ನಿಯಂತ್ರಣ ಇಲಾಖೆ	೧೧	೨೮	೭೧	೧೮
ಆ)	ಕಳೆದ ಎಷ್ಟು ವರ್ಷಗಳಿಂದ ಈ ಹುದ್ದೆಗಳು ಖಾಲಿ ಇವೆ?	ವಯೋ ನಿವೃತ್ತಿಯಿಂದ ಮತ್ತು ಪದೋನ್ನತಿಯಿಂದ ಕಾಲ-ಕಾಲಕ್ಕೆ ಹುದ್ದೆಗಳು ಖಾಲಿ ಇರುತ್ತದೆ					
ಇ) ಉ)	ಸಿಬ್ಬಂದಿಗಳ ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕರಿಗೆ / ರೋಗಿಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಖಾಲಿ ಇರುವ ಹುದ್ದೆಗಳನ್ನು ಇಲಾಖೆಯಲ್ಲಿ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ನೇರ ನೇಮಕಾತಿ ಮತ್ತು ಪದೋನ್ನತಿಯ ಮೂಲಕ ಭರ್ತಿ ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ಹಾಗೂ ಖಾಲಿ ಇರುವ ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಅದರಂತೆ ಆಯಾ ಜಿಲ್ಲಾಧಿಕಾರಿಗಳು ಕ್ರಮ ವಹಿಸಿರುತ್ತಾರೆ ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ ೨೫೦ ವೈದ್ಯಾಧಿಕಾರಿಗಳ ಆಯ್ಕೆ ಪಟ್ಟಿಯನ್ನು ಪರಕಟಿಸಲಾಗಿದ್ದು				

	ಹಾಗಾದಲ್ಲಿ, ಖಾಲಿ ಇರುವ ಹುದ್ದೆಗಳ ಭರ್ತಿಗೆ ಕೈಗೊಂಡಿರುವ ಕ್ರಮಗಳೇನು ಹಾಗೂ ಎಷ್ಟು ಸಮಯದಲ್ಲಿ ಭರ್ತಿ ಮಾಡಲಾಗುವುದು?	ನೇಮಕಾತಿ ಆದೇಶವನ್ನು ಶೀಘ್ರದಲ್ಲಿಯೇ ಹೊರಡಿಸಲಾಗುವುದು ಮತ್ತೆ ಹೊಸದಾಗಿ ೨೫೦ ವೈದ್ಯಾಧಿಕಾಖುಇ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ದೊರಕಿದ್ದು ನೇಮಕಾತಿಗಾಗಿ ಅರ್ಜಿಯನ್ನು ಆಹ್ವಾನಿಸಲು ಪ್ರಕ್ರಿಯೆ ಜಾರಿಯಲ್ಲಿದೆ ವಿಶೇಷ ನೇರ ನೇಮಕತಿ ಸಮಿತಿಯಿಂದ ೨೮೦೭ ವಿವಿಧ ವೃಂದ ಹುದ್ದೆಗಳನ್ನು ನೇಮಕ ಮಾಡಲು ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೬೮೦ (೧೯೧೫)

ಸದಸ್ಯರ ಹೆಸರು ಶ್ರೀ ನರಸಿಂಹಸ್ವಾಮಿ ಜೆ
(ದೊಡ್ಡಬಳ್ಳಾಪುರ)

ಉತ್ತರಿಸುವ ಸಚಿವರು ಶ್ರೀ ಬಾಲಚಂದ್ರ. ಲ
(ಸಮಾಜ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
೧	ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸಲಾಗುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಗ್ರಂಥಾಲಯ ಸ್ಥಾಪನೆಗೆ ಸರ್ಕಾರ ಯೋಚಿಸಿದೆಯೇ?	ಹೌದು
೨	ಹಾಗಿದ್ದಲ್ಲಿ, ಈ ಗ್ರಂಥಾಲಯವನ್ನು	ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಲಭ್ಯತೆ,